ಅಸಲು ದಾವೆ ನಂಃ 219/2017 ಪಿ.ಡಬ್ಲ್ಯೂಃ 3– ಈರಪ್ಪ ತಂದೆ ಹನಮಂತಪ್ಪ
ಬಿಚ್ಚೂರು

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 17–07–2026 ರಂದು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಶ್ರೀ. VSB ವಕೀಲರಿಂದ ಪ್ರತಿವಾದಿಯರ ಪರಃ**

ನಾನು ಕಾಂಗ್ರೆಸ ಪಕ್ಷದ ಸಕ್ರಿಯ ಕಾರ್ಯಕರ್ತ ಮತ್ತು ನಾಯಕ ಎಂದರೆ ಸರಿಯಲ್ಲ. ನಾನು ಕಾಂಗ್ರೆಸ ಪಕ್ಷದಲ್ಲಿ ಏನಾದರು ಇದ್ದರೆ ಹೋಗುತ್ತೇನೆ, ಆದರೆ ಸಕ್ರಿಯವಾಗಿ ನಾನು ಇರುವುದಿಲ್ಲ ಮತ್ತು ಅದರಲ್ಲಿ ನನಗೆ ಯಾವುದೇ ಹುದ್ದೆ ಇಲ್ಲ. ನನ್ನ ಸಹೋದರ ಸನ್ 2010 ರಲ್ಲಿ ತಾಲೂಕ ಪಂಚಾಯತಿಯ ಸದಸ್ಯ ಸ್ಥಾನಕ್ಕೆ ಸ್ಪರ್ಧಿಸಿ ಗೆದ್ದಿರುತ್ತಾರೆ. ಅವರು ಈಗಲೂ ತಾಲೂಕು ಪಂಚಾಯತಿಯ ಸದಸ್ಯ ಎಂದರೆ ಸರಿಯಲ್ಲ. ನನ್ನ ಹೆಂಡತಿಯು ಸಹ ಜಿಲ್ಲಾ ಪಂಚಾಯತಿಯ ಸದಸ್ಯ ಸ್ಥಾನಕ್ಕೆ ಸನ್ 2016 ರಲ್ಲಿ ಸ್ಪರ್ಧಿಸಿ ಗೆದ್ದಿರುತ್ತಾರೆ. ಅವರು ನಂತರದಲ್ಲಿ ಉಪಾಧ್ಯಕ್ಷರಾಗಿಯೂ ಸಹ ಆಯ್ಕೆ ಆಗಿದ್ದರು ಎಂದರೆ ಸರಿ. ನನ್ನ ಹೆಂಡತಿ ಮತ್ತು ಸಹೋದರ ಕಾಂಗ್ರೆಸ ಪಕ್ಷದಿಂದ ಸ್ಪರ್ಧಿಸಿದ್ದರು ಎಂದರೆ ಸರಿ. ನಾನು ಯಾವುದೇ ಚುನಾವಣೆಗೆ ಸ್ಪರ್ದೆ ಮಾಡಿಲ್ಲ. ನಾನು ಸಹಕಾರಿ ಸಂಘದಲ್ಲಿ ಅವಿರೋದವಾಗಿ ಅಧ್ಯಕ್ಷ ಎಂದು 2 ವರ್ಷಗಳ ಕಾಲ ಆಯ್ಕೆಯಾಗಿದ್ದೆ.

2. ಈರಪ್ಪ ಯಲ್ಲಪ್ಪ ಬಿಚ್ಚೂರ ಮತ್ತು ನಾನು ಒಂದೇ ವಂಶಸ್ತರು ಎಂದರೆ ಇರಬಹುದು. ನಿಡಗುಂದಿಯಲ್ಲಿ ನಾವು ವಾಸವಿರುವ ಮನೆಯು ಮೂಲತಹ ಒಂದೇ ಇದ್ದು ಅದರಲ್ಲಿ ಭಾಗ ಮಾಡಿಕೊಂಡು ನಾವು ಒಂದು ಭಾಗದಲ್ಲಿ ಮತ್ತು ಈರಪ್ಪ ಯಲ್ಲಪ್ಪ ಬಿಚ್ಚೂರ ಒಂದು ಭಾಗದಲ್ಲಿ ವಾಸವಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಮನೆ ಮತ್ತು ಈರಪ್ಪ ಯಲ್ಲಪ್ಪ ಬಿಚ್ಚೂರ ರವರ ಮನೆಯ ಮಧ್ಯ ಕೇವಲ ಒಂದೇ ಒಂದು ಗೋಡೆ ಇದೆ ಎಂದರೆ ಸರಿ. ನನ್ನ ಮತ್ತು ಈರಪ್ಪ ಯಲ್ಲಪ್ಪ ಬಿಚ್ಚೂರ ರವರ ಮಧ್ಯ ಕುಟುಂಬದ ಆಸ್ತಿಗಳ ಸಲವಾಗಿ ಇದೆ ನ್ಯಾಯಾಲಯದಲ್ಲಿ ವ್ಯಾಜ್ಯಗಳು ಇವೆ ಎಂದರೆ ಸುಳ್ಳು ಕೇಸ ಇರುತ್ತವೆ. ಸರ್ವೆ ನಂ.394/5 ಈರಪ್ಪ ಯಲ್ಲಪ್ಪ ಬಿಚ್ಚೂರ ರವರ ಮಾಲ್ಕಿ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯಲ್ಲಿ 3 ಗುಂಟೆ 8 ಆಣೆ ಯನ್ನು ರೇವಣಸಿದ್ದೇಶ್ವರ ಗ್ರಾಮಿಣಾಭೀವೃದಿ ಸಮೀತಿಗೆ ದಾನ ಪತ್ರ ಮತ್ತು ಹಕ್ಕು ಬಿಟ್ಟ ಪತ್ರವನ್ನು ಈರಪ್ಪ ಯಲ್ಲಪ್ಪ ಬಿಚ್ಚೂರ ರವರು ಕಾರ್ಯಗದ ಮಾಡಿಕೊಟ್ಟಿರುವ ಹಾಗೇ ಸುಳ್ಳು ಕಾಗದ ಪತ್ರಗಳನ್ನು ನಾವು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಎ.ಡಿ.ಎಲ್.ಆರ್. ಕಚೇರಿಗೆ

ಈರಪ್ಪ ಯಲ್ಲಪ್ಪ ಬಿಚ್ಚೂರ ರವರು ಅರ್ಜಿಯನ್ನು ಕೊಟ್ಟಿರುವ ಹಾಗೇ ಅದರಲ್ಲಿ ನನ್ನ ಮೊಬೈಲ ನಂಬರ ಮತ್ತು ಚುನಾವಣಾ ಗುರುತಿನ ನಂಬರನ್ನು ನಮೂದಿಸಿ ನಾವು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಸ್ವೀಕೃತಿ ಪತ್ರದ ದೃಢಿಕೃತ ಪತ್ರವನ್ನು ತೋರಿಸಿ ಅದರಲ್ಲಿ ನಿಮ್ಮ ಮೊಬೈಲ ನಂಬರ ಮತ್ತು ಗುರುತಿನ ಚೀಟಿಯ ನಂಬರ ಇರುತ್ತದೆ ಎಂದು ಕೇಳಲಾದ ಪ್ರಶ್ನೆಗೇ ಸಾಕ್ಷಿಯು ಅದನ್ನು ಪ್ರತಿವಾದಿಯರು ಸೃಷ್ಟಿಸಿರುತ್ತಾರೆ ಎಂದು ನುಡಿಯುತ್ತಾರೆ. ಈ ನ್ಯಾಯಾಲಯಲದಲ್ಲಿ ಪ್ರತಿವಾದಿಯರ ವಿರುದ್ಧ ಚಾಲ್ತಿಯಲ್ಲಿರುವ ಬೆರೆ ದಾವೆಗಳಲ್ಲಿ ನಾನು ಸಾಕ್ಷಿ ನುಡಿಯುವ ಕಾಲಕ್ಕೆ ಸದರಿ ಸ್ವಿಕೃತಿ ಪತ್ರವನ್ನು ಒಪ್ಪಿಕೊಂಡಿದ್ದೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ದಾಖಲಾತಿಗಳನ್ನು ತೆಗೆಸಿ ನೊಡಿದಾಗ ಸದರಿ ಸ್ವೀಕೃತಿ ಪತ್ರವನ್ನು ಸೃಷ್ಟಿ ಮಾಡಿದ ಬಗ್ಗೆ ನನಗೆ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ಸುಮಾರು 2 ತಿಂಗಳ ಹಿಂದೆ ನನಗೆ ಗೊತ್ತಾಗಿರುತ್ತದೆ. ನನಗೆ ಸದರಿ ವಿಷಯ ಗೊತ್ತಾದ ನಂತರ ಅದನ್ನು ಸೃಷ್ಟಿ ಮಾಡಿದವರ ವಿರುದ್ಧ ಕಾನೂನು ಕ್ರಮ ಜರುಗಿಸಿಲ್ಲ, ನನ್ನ ವಕೀಲರ ಜೊತೆ ಸಮಾಲೋಚನೆ ನಡೆಸಿದ್ದೇನೆ. ನಾನು ತೆಗೆದುಕೊಂಡು ಕಾಗದ ಪತ್ರಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿಸಲು ನನಗೆ ಯಾವುದೇ ತೊಂದರೆ ಇಲ್ಲ. ಸಾಕ್ಷಿಗೆ ಒಂದು ಛಾಯಾ ಚಿತ್ರದ ದೃಢಿಕೃತ ಪ್ರತಿಯನ್ನು ತೋರಿಸಿ ಸರ್ವೆಯರ ಈರಪ್ಪ ಯಲ್ಲಪ್ಪ ಬಿಚ್ಚೂರ ರವರ ಹೊಲವನ್ನು ಸರ್ವೆ ಮಾಡಲು ಬಂದಾಗ ತೆಗೆದ ಫೋಟೊದಲ್ಲಿ ನೀವು, ಈರಪ್ಪ ಯಲ್ಲಪ್ಪ ಬಿಚ್ಚೂರ ಮತ್ತು ಸರ್ವೆಯರ ಇದ್ದೇವೆ ಎಂದು ಕೇಳಲಾದ ಪ್ರಶ್ನೆಗೆ ಸಾಕ್ಷಿಯು ನಮ್ಮ ಜಮೀನನ್ನು ಅಳತೆ ಮಾಡಲು ಬಂದಾಗ ಸದರಿ ಫೋಟೊ ತೆಗೆಯಲಾಗಿದೆ ಎಂದು ನೋಡಿ ಒಪ್ಪಿರುವುದರಿಂದ ಅದನ್ನು ನಿ.ಡಿ-9 ಎಂದು ಗುರುತಿಸಲಾಯಿತು. ಸರ್ವೆಯರ ಆದಿನ ಈರಪ್ಪ ಯಲ್ಲಪ್ಪ ಬಿಚ್ಚೂರ ರವರ ಜಮೀನನ್ನು ಸರ್ವೆ ಮಾಡಲು ಬಂದಿದ್ದರಿಂದ ಆತನು ಸರ್ವೆ ಕಾರ್ಯಕ್ಕೆ ತಕರಾರು ಮಾಡಿ ಅವರನ್ನು ವಾಪಸ ಕಳುಹಿಸಿದ್ದ ಎಂದರೆ ಸಾಕ್ಷಿಯು ದುರುದ್ದೇಶದಿಂದ ಕಳುಹಿಸಿದ್ದ ಎಂದು ನುಡಿಯುತ್ತಾರೆ. ಸಾಕ್ಷಿಯು ರೋಣ ವಿಧಾನಸಭಾ ಕ್ಷೆತ್ರದ ಮತದಾರರ ಪಟ್ಟಿಯ ಭಾಗದ ನಂಬರ 142 ನೇದ್ದರ ದೃಢಿಕೃತ ಪ್ರತಿಯನ್ನು ನೋಡಿ ಒಪ್ಪಿರುವುದರಿಂದ ಅದನ್ನು ನಿ.ಡಿ-10 ಎಂದು ಗುರುತಿಸಲಾಯಿತು. ನಾನು ಸಂಗಪ್ಪ ಬಾಗ್ಲಿ ಮತ್ತು ಸರ್ವೆಯರ ಸೇರಿ ನಡೆಸಿದ ಬೇಕಾಯಿದೆಸಿರಿ ಕೃತ್ಯದ ವಿರುದ್ಧ ಈರಪ್ಪ ಯಲ್ಲಪ್ಪ ಬಿಚ್ಚೂರ ರವರು ನಮ್ಮ ವಿರುದ್ಧ ಇದೆ ನ್ಯಾಯಾಲಯದಲ್ಲಿ ಖಾಸಗಿ ದೂರು ನಂ.20/2017 ನೇದ್ದನ್ನು ಸಲ್ಲಿಸಿದ್ದ ಎಂದರೆ ಸುಳ್ಳು ಸಲ್ಲಿಸಿದ್ದ ಎಂದು ನುಡಿಯುತ್ತಾರೆ. ಸರ್ವೆಯರಗೆ ಮತ್ತು ಸಂಗಪ್ಪ ಬಾಗ್ಲಿಯವರಿಗೆ ತೊಂದರೆಯಾಗಬಾರದು ಎಂದು ನಾನು ನನ್ನ ರಾಜಕಿಯ ಪ್ರಭಾವ ಬೀರಿ ಸದರಿ ದೂರನ್ನು

ಹಿಂಪಡೆಯುವಂತೆ ವ್ಯವಸ್ಥೆ ಮಾಡಿದೆ ಎಂದರೆ ಸರಿಯಲ್ಲ. ಎ.ಡಿ.ಎಲ್.ಆರ್. ರವರು ಸರ್ವೆ ನಂ.394/5 ಕ್ಕೆ ಸಂಬಂದಪಟ್ಟಂತೆ ಯಾವುದೇ ಪ್ರಕ್ರಿಯೇ ಕೈಕೊಂಡಿಲ್ಲ, ಕೈಬಿಟ್ಟಿದ್ದೇವೆ ಎಂದು ಹಿಂಬರಹವನ್ನು ಈರಪ್ಪ ಯಲ್ಲಪ್ಪ ಬಿಚ್ಚೂರ ರವರಿಗೆ ನೀಡಿದ್ದಾರೆ ಎಂದರೆ ಸುಳ್ಳು. ಸಾಕ್ಷಿಯು ಮುಂದುವರೆದು ನಾನೇ ಖುದ್ದು ಅರ್ಜಿ ಕೊಟ್ಟು ಹಿಂಪಡೆದಿದ್ದೇನೆ ಎಂದು ನುಡಿಯುತ್ತಾರೆ.

3. ಸರ್ವೆ ನಂ.394/1 ಹಾಗೂ 394/2 ರ ಜಮೀನಿನಲ್ಲಿ ಪ್ರತಿವಾದಿಯರು ವಹಿವಾಟು ಮಾಡುತ್ತಿದ್ದಾಗ ನಾನು ಮತ್ತು ಇನ್ನಿತರ 25 ಜನರು ಸೇರಿ ಅಕ್ರಮ ಪ್ರವೇಶ ಮಾಡಿ ಅವರ ಮೇಲೆ ಹಲ್ಲೆ ಮಾಡಿದ್ದೇವೆ ಎಂದರೆ ಸುಳ್ಳು. ಆ ಬಗ್ಗೆ ಅವರು ನಮ್ಮ ವಿರುದ್ಧ ನರೆಗಲ ಪೋಲಿಸ ಠಾಣೆಯಲ್ಲಿ ದೂರು ಕೊಟ್ಟಿದ್ದರು ಎಂದರೆ ಸುಳ್ಳು ದೂರು ಕೊಟ್ಟಿದ್ದರು ಎಂದು ನುಡಿಯುತ್ತಾರೆ. ಸದರಿ ಪ್ರಕರಣದಲ್ಲಿ ನಮ್ಮ ರಾಜಕಿಯ ಪ್ರಭಾವ ಬೀರಿ ಪೊಲೀಸರು ಸುಳ್ಳು ವರದಿಯನ್ನು ಸಲ್ಲಿಸುವಂತೆ ಮಾಡಿದ್ದೇನೆ ಎಂದರೆ ಸರಿಯಲ್ಲ. ನಂತರ ಅವರು ನಮ್ಮ ವಿರುದ್ಧ ಇದೆ ನ್ಯಾಯಾಲಯದಲ್ಲಿ ಖಾಸಗಿ ದೂರು ನೀಡಿ ಸಿ.ಸಿ ನಂ.29/2022 ನೇದ್ದರಲ್ಲಿ ನಮಗೆ ಸಮನ್ಸ್ ಹೊರಡಿಸಲಾಗಿದೆ ಎಂದರೆ ಸಾಕ್ಷಿಯು ದುರುದ್ದೇಶದಿಂದ ಸುಳ್ಳು ಕೇಸ ಹಾಕಿದ್ದಾರೆ ಎಂದು ನುಡಿಯುತ್ತಾರೆ. ಅವರು ದೂರು ನೀಡಿದ ನಂತರ ನಾನು ನನ್ನ ಹೆಂಡತಿಯಕಡೆಯಿಂದ ಅವರ ವಿರುದ್ಧ ಸುಳ್ಳು ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸಿ.ಸಿ ನಂ.72/2018 ಎಂದು ಚಾಲ್ತಿ ಇತ್ತು ಎಂದರೆ ಸರಿ. ಸದರಿ ಪ್ರಕರಣದಲ್ಲಿ ಯಾವು ತಪ್ಪು ಮಾಡಿಲ್ಲ ಎಂದು ಅವರನ್ನು ಬಿಡುಗಡೆ ಮಾಡಲಾಗಿದೆ ಎಂದರೆ ಸಾಕ್ಷಿಯು ಹಿರಿಯರು ರಾಜಕಿಯದಲ್ಲಿ ಮತ್ತು ಸಮಾಜದಲ್ಲಿ ಇರುವುದರಿಂದ ಮತ್ತು ಪ್ರತಿವಾದಿಯರು ಹಿರಿಯರ ಮೇಲೆ ಒತ್ತಡ ಹಾಕಿದ್ದರಿಂದ ನಮಗೆ ಜಾಸ್ತಿ ತಲೆಕೆಡಿಸಿಕೊಳ್ಳಬೇಡಿ ಎಂದು ಹೇಳಿದ್ದರಿಂದ ನಾವು ಬಿಟ್ಟಿದ್ದೇವೆ ಎಂದು ನುಡಿಯುತ್ತಾರೆ.

4. ಸರ್ವೆ ನಂ.394/1 ಹಾಗೂ 394/2 ರ ಜಮೀನಿನಲ್ಲಿ ಎಷ್ಟು ಪ್ಲಾಟಗಳನ್ನು ಮಾಡಲಾಗಿದೆ ಎಂದು ನಿಮಗೆ ಗೊತ್ತಿದೆಯಾ ಎನ್ನುವ ಪ್ರಶ್ನೇಗೆ ಸಾಕ್ಷಿಯು ಸುಮಾರು 40 ಪ್ಲಾಟಗಳನ್ನು ಮಾಡಿದ್ದಾರೆ ಎಂದು ನುಡಿಯುತ್ತಾರೆ. ಆ ಬಗ್ಗೆ ನಾನು ಯಾವುದೇ ದಾಖಲಾತಿ ನೋಡಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಸರ್ವೆ ನಂ.394/1 ಹಾಗೂ 394/2 ರ ಜಮೀನಿನಲ್ಲಿ ಎಷ್ಟು ಪ್ಲಾಟಗಳು ಆಗಿದೆ ಎಂದು ಹೇಳಿ ಬರೆಸಿಲ್ಲ ಎಂದರೆ ಸುಮಾರು 40 ಪ್ಲಾಟಗಳು ಆಗಿವೆ ಎಂದು ಹೇಳಿ ಬರೆಸಿರುತ್ತೇನೆ. 40 ಪ್ಲಾಟಗಳು ಇದ್ದ ಬಗ್ಗೆ ದಾಖಲಾತಿ ನೋಡಿಲ್ಲ, ಬಾಂಡ ಆಧಾರದ ಮೇಲೆ ನಾನು ಹೇಳಿರುತ್ತೇನೆ. ಬಾಂಡ ಬರೆಯುವ ಕಾಲಕ್ಕೆ 40 ಪ್ಲಾಟಗಳು ಇದ್ದ ಬಗ್ಗೆ ದಾಖಲೆ ಇರಲಿಲ್ಲ. ಸ್ವೀಕೃತಿ

ಸೃಷ್ಟಿಸಿದ್ದಾರೆ ಎನ್ನುವ ಕುರಿತು ನಾನು ತೆಗೆಸಿದ ದಾಖಲೆಗಳನ್ನು ನಮ್ಮ ವಕೀಲರಿಗೆ ಕೊಟ್ಟಿರುತ್ತೇನೆ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಸಲು ನಮ್ಮ ವಕೀಲರ ಜೊತೆ ಸಮಾಲೋಚನೆ ಮಾಡಿ ಹೇಳುತ್ತೇನೆ. ಖೊಟ್ಟಿ ದಾಖಲೆಗಳನ್ನು ಸೃಷ್ಟಿ ಮಾಡಿರುವುದರಿಂದ, ಅವುಗಳನ್ನು ಹಾಜರುಪಡಿಸಿಸಲು ನಮ್ಮ ವಕೀಲರ ಜೊತೆ ಸಮಾಲೋಚನೆ ಮಾಡಿ ಹೇಳುತ್ತೇನೆ ಎಂದು ಹಾರಿಕೆ ಉತ್ತರ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯ ಪ್ರಶ್ನಿತ ಸಂಚಗಾರ ಪತ್ರವನ್ನು ಬರೆಯುವ ಕಾಲಕ್ಕೆ ನಾನು ಹಾಜರಿದ್ದೆ. ಅದನ್ನು ಸಂಗಪ್ಪ ಬಾಗ್ಲಿಯವರು ಬರೆದಿರುತ್ತಾರೆ. ಯಾವುದೇ ದಾಖಲೆಗಳನ್ನು ನೋಡಿ ಬರೆದಿರುವುದಿಲ್ಲ. ಸದರಿ ಸಂಚಗಾರ ಪತ್ರದಲ್ಲಿ ಏನೆಲ್ಲಾ ಸಂಗತಿಗಳನ್ನು ಬರೆಯಲಾಗಿದೆ ಎಂದು ನನಗೆ ಸಂಪೂರ್ಣ ಮಾಹಿತಿ ಇರುತ್ತದೆ. ಸಂಪೂರ್ಣ ಮಾಹಿತಿ ಇದೆ ಎಂದು ಉದ್ದೇಶ ಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಷ್ಟು ಪ್ಲಾಟಗಳು ಆಗಿವೆ ಎನ್ನುವ ಬಗ್ಗೆ ನನಗೆ ಮಾಹಿತಿ ಇದೆ. ವಾದಿಯು ಪ್ಲಾಟ ನಂ.36 ನ್ನು ಖರೀದಿಸಿರುತ್ತಾರೆ. ಪ್ಲಾಟ ನಂ.36 ಇದೆ ಎನ್ನುವ ಕುರಿತು ನಾನು ಯಾವುದೇ ದಾಖಲಾತಿ ನೋಡಿಲ್ಲ. ಈರಪ್ಪ ಯಲ್ಲಪ್ಪ ಬಿಚ್ಚೂರ ಆಗಲಿ ಆತನ ಹೆಂಡತಿ, ಮಕ್ಕಳಾಗಲಿ ಸದರಿ ಜಮೀನಿನಲ್ಲಿ ಯಾವುದೇ ಪ್ಲಾಟಗಳನ್ನು ಮಾರಾಟ ಮಾಡಿಲ್ಲ, ಯಾರಿಗೂ ಯಾವುದೇ ಸಂಚಗಾರ ಪತ್ರ ಬರೆದುಕೊಟ್ಟಿಲ್ಲ ಮತ್ತು ಯಾವುದೇ ಹಣ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಪ್ರಶ್ನಿತ ಸಂಚಗಾರ ಪತ್ರದಲ್ಲಿ ಇರುವ ಸಹಿಗಳು ಈರಪ್ಪ ಯಲ್ಲಪ್ಪ ಬಿಚ್ಚೂರ ಮತ್ತು ಆತನ ಹೆಂಡತಿ, ಮಕ್ಕಳ ಸಹಿ ಅಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.394/1 ಹಾಗೂ 394/2 ರ ಜಮೀನಿನುಗಳು ಇಂದಿಗೂ ಶೆತ್ಕಿ ಜಮೀನುಗಳು ಎಂದರೆ ಸರಿಯಲ್ಲ. ವಾದಿಯೂ ಕಬ್ಜಾದಲ್ಲಿ ಇದ್ದಾನೆ ಎನ್ನುವ ಕುರಿತು ನಾನು ದಾಖಲಾತಿಯನ್ನು ನೋಡಿದ್ದೇನೆ. ನಾನು GPS photo ನೋಡಿದ್ದೇನೆ. ವಾದಿಯರು ಕಬ್ಜಾದಲ್ಲಿ ಇದ್ದಾರೆ ಮತ್ತು ನಾನು GPS photo ನೋಡಿದ್ದೇನೆ ಎಂದು ಉದ್ದೇಶ ಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸನ್ 2011 ರಲ್ಲಿ ಗುಂಟೆವಾರು ಪ್ಲಾಟಗಳು ಖರೀದಿಯಾಗುತ್ತಿರಲಿಲ್ಲ ಎನ್ನುವ ಕುರಿತು ಯಾವುದೇ ದಾಖಲೆ ಅಥವಾ ಸರಕಾರದ ಆದೇಶವನ್ನು ನಾನು ನೋಡಿಲ್ಲ. ವಾದಿಯರಿಗೆ ನಾನು ಸಂಚಗಾರ ಪತ್ರದ ಬದಲು ನೊಂದಾಯಿತ ಪತ್ರವನ್ನು ಬರೆಸಿಕೊಳ್ಳಿ ಎಂದು ಹೇಳಿಲ್ಲ. ನನ್ನ ಮತ್ತು ಈರಪ್ಪ ಯಲ್ಲಪ್ಪ ಬಿಚ್ಚೂರ ರವರ ಮಧ್ಯ ಕುಟುಂಬದ ಆಸ್ತಿಗಳ ಕುರಿತು ವ್ಯಾಜ್ಯಗಳು ಇರುವುದರಿಂದ ನಾನು ಸುಮಾರು 40 ಜನರನ್ನು ಎತ್ತಿಕಟ್ಟಿ ಸುಳ್ಳು ಕಾಗದ ಪತ್ರಗಳನ್ನು ಸೃಷ್ಟಿಸಿ ಅವರಿಂದ ಸುಳ್ಳು ದಾವೆಗಳನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈರಪ್ಪ ಯಲ್ಲಪ್ಪ ಬಿಚ್ಚೂರ ಮತ್ತು ಆತನ ಹೆಂಡತಿ ಮಕ್ಕಳಿಗೆ

ತೊಂದರೆ ಕೊಡುವ ಉದ್ದೇಶದಿಂದ ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಸುಳ್ಳು ಸಂಗತಿಗಳನ್ನು ಬರೆಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ.

Sd/-

(ಹುಲುಗಪ್ಪ ಡಿ)

ಪ್ರಧಾನ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ

ನ್ಯಾಯಾಧೀಶರು ರೋಣ.

**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 17-07-2026 ರಂದು ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: ಶ್ರೀ VSB ಪ್ರತಿವಾದಿಯರ ಪರ ವಕೀಲರಿಂದಃ**

ನನ್ನ ಸಾಕ್ಷಿ ಪ್ರಮಾಣ ಪತ್ರಕ್ಕೆ ವೀರಪ್ಪ ಯಲ್ಲಪ್ಪ ಬಿಚ್ಚೂರ ರವರು ಮಾಹಿತಿ ನೀಡಿದ್ದಾರೆ. ಅದರಲ್ಲಿ ಬರೆದ ಮಾಹಿತಿಯ ಬಗ್ಗೆ ನನಗೆ ಗೊತ್ತಿದೆ. ಸಂಚಗಾರ ಪತ್ರದ ಬಗ್ಗೆ ಅದರಲ್ಲಿ ಬರೆದಿದೆ. ದಿಃ 14-05-2011 ರಂದು ವ್ಯವಹಾರ ಆಗಿದೆ. ರೂ.33 ಸಾವಿರಗಳಿಗೆ ಒಂದುವರೆ ಪ್ಲಾಟನ್ನು ಕೊಡುವ ಬಗ್ಗೆ ವ್ಯವಹಾರ ಆಗಿರುತ್ತದೆ. ಕಾಗದ ಬರೆಯುವ ಪೂರ್ವದ 8 ದಿನಗಳ ಮೊದಲು ಮಾತುಕತೆ ಆಗಿರುತ್ತದೆ. ಆಗ ಐ.ಹೆಚ್. ಬಿಚ್ಚೂರು, ಎಸ್.ಎಸ್.ಹೀರೆಮಠ ಇದ್ದರು. ರೂ.35 ಸಾವಿರಗಳಿಗೆ ಪ್ಲಾಟ ಕೊಡುತ್ತೇವೆ ಎಂದು ಹೇಳಿದ್ದು, ರೂ.33 ಸಾವಿರಗಳಿಗೆ ಮಾತುಕತೆ ಮುಗಿದಿರುತ್ತದೆ. ಆ ದಿನ ಕೇವಲ ಮಾತುಕತೆಯಾಗಿದ್ದು, ಹಣ ಕೊಡುವುದು-ತೆಗೆದುಕೊಳ್ಳುವುದು ಆಗಿರುವುದಿಲ್ಲ. ದಿಃ 14-05-2011 ರಂದು ಮದ್ಯಾನ 02.30 ಗಂಟೆ ಸುಮಾರಿಗೆ ಮೇಲೆ ಹೇಳಿದ ವ್ಯಕ್ತಿಗಳು ಇದ್ದರು. ರೂ.500/- ಮತ್ತು ರೂ.100/- ಮುಖಬೆಲೆಯ ನೋಟುಗಳು ಇದ್ದವು. ಅವು ಎಷ್ಟು ಇದ್ದವು ಎಂದು ನನಗೆ ಗೊತ್ತಿಲ್ಲ. ನಕ್ಷೆ ನೋಡಿ ಕಾಗದ ಪತ್ರ ಬರೆದಿರುತ್ತೇನೆ. ಅದು ನಾವೆ ಮಾಡಿದ ನಕ್ಷೆ ಇತ್ತು. ನಾನು ಈರಪ್ಪ ಯಲ್ಲಪ್ಪ ಬಿಚ್ಚೂರ ಸೇರಿ ನಕ್ಷೆ ಮಾಡಿದ್ದೇವು. ಸದರಿ ನಕ್ಷೆಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇವೆ. ನಕ್ಷೆ ಬಿಟ್ಟು ಉತಾರೆ ಇತ್ತು. ಈ ದಿನ ನ್ಯಾಯಾಲಯಕ್ಕೆ ನಾನು ಈರಪ್ಪ ಹನಮಪ್ಪ ಬಿಚ್ಚೂರ ರವರು ಸೇರಿ ಬಂದಿದ್ದೇವೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿ, ಓದಿರುತ್ತೇನೆ, ಅದರಲ್ಲಿಯ ಖಂಡಿಕೆ 10 ಅನ್ನು ನಾನೇ ಹೇಳಿ ಬರೆಸಿರುತ್ತೇನೆ. ಎಲ್ಲಾ ದಾವೆಗಳಲ್ಲಿ ನಾನು ಈರಪ್ಪ ಹನಮಪ್ಪ ಬಿಚ್ಚೂರ ರವರು ನಮ್ಮನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬರುವುದು ಹೋಗುವುದು ಮಾಡುತ್ತಾರೆ ಎಂದರೆ ಸರಿಯಲ್ಲ. ನಾನು

ಬಾಂಡ್ ಪೇಪರ ಮೇಲೆ ಕಾಗದ ಪತ್ರ ಬರೆದಿರುತ್ತೇನೆ. ಅದು ರೂ.100/- ಮುಖಬೆಲೆಯ ಬಾಂಡ ಇತ್ತು. ಬಾಂಡನ್ನು ಕಾಗದ ಬರೆಸಿಕೊಳ್ಳುವವರು ಮತ್ತು ಈರಪ್ಪ ಯಲ್ಲಪ್ಪ ಬಿಚ್ಚೂರ ರವರು ತೆಗೆದುಕೊಂಡು ಬಂದಿದ್ದರು. ಕಾಗದ ಪತ್ರ ಬರೆಯುವ 2-3 ದಿನಗಳ ಮೊದಲು ಬಾಂಡನ್ನು ತಂದಿತ್ತು, ನಿಖರ ದಿನಾಂಕ ಹೇಳಲು ಬರುವುದಿಲ್ಲ. ಅದನ್ನು ಎಲ್ಲಿಂದ ತಂದಿದ್ದರು ಎಂದು ನನಗೆ ಗೊತ್ತಿಲ್ಲ. ಅರ್ಧತಾಸಿನಲ್ಲಿ ವ್ಯವಹಾರ ಮುಗಿದು ಕಾಗದ ಪತ್ರ ಬರೆದಿದ್ದೇನೆ. ದಿಃ 14-05-2011 ರಂದು ನಾನು ಸುಮಾರು 25 ಕಾಗದ ಪತ್ರಗಳನ್ನು ಬರೆದಿರುತ್ತೇನೆ. ವ್ಯವಹಾರ ಮುಗಿಸಿ ಒಂದು ಕಾಗದ ಪತ್ರ ಬರೆಯಲು ಅರ್ಧತಾಸು ಸಮಯಬೇಕಾಯಿತು. ಆ ದಿನ ಮೊದಲು ಈರವ್ವ ಶರಣಪ್ಪ ಗಡದ ರವರ ಕಾಗದ ಪತ್ರವನ್ನು ಬೆಳಿಗ್ಗೆ 08.00-08.30 ಗಂಟೆ ಸುಮಾರಿಗೆ ಬರೆದಿರುತ್ತೇನೆ. 25 ನೇ ಕಾಗದ ಪತ್ರ ಬರೆದಾಗ ರಾತ್ರಿ ಸುಮಾರು 08.00 ಗಂಟೆ ಆಗಿತ್ತು.

2. ಈರಪ್ಪ ಯಲ್ಲಪ್ಪ ಬಿಚ್ಚೂರ ಮಾಹಿತಿ ನೀಡಿದ ಮತ್ತು ನಾನು ಸುಮಾರು 25 ಕಾಗದ ಪತ್ರಗಳನ್ನು ಬರೆದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈರಪ್ಪ ತಂದೆ ಹನಮಪ್ಪ ಬಿಚ್ಚೂರ, ಪಿ.ಸಿ ಹಿರೇಮಠ, ಯಲ್ಲಪ್ಪ ಕಳ್ಳಿಗುಡ್ಡದ, ಹೊನ್ನಪ್ಪ ಕಂಬಳಿ ಹಾಗೂ ಐ.ಹೆಚ್. ಬಿಚ್ಚೂರ ರವರ ಸಮಕ್ಷಮ ಕಾಗದ ಪತ್ರ ತಯಾರಿಸಲು ನನಗೆ ಮಾಹಿತಿ ನೀಡಿದರು ಮತ್ತು ಆ ಪ್ರಕಾರ ನಾನು ಕಾಗದ ಪತ್ರ ಬರೆದೆ ಎಂದು ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಹೇಳಿ ಬರೆಸಿಲ್ಲ. ಸದರಿಯವರು ಜೀವಂತ ಇರುತ್ತಾರೆ. ಕಾಗದ ಪತ್ರಕ್ಕೆ ಮೊದಲು ಈರಪ್ಪ ಯಲ್ಲಪ್ಪ ಬಿಚ್ಚೂರ ಸಹಿ ಮಾಡಿರುತ್ತಾರೆ. ಕಾಗದ ಪತ್ರ ಬರೆದ ಮೇಲೆ ಅದನ್ನು ಓದಿ ಹೇಳಿದೆ, ಈರಪ್ಪ ಯಲ್ಲಪ್ಪ ಬಿಚ್ಚೂರ ಮತ್ತು ಆತನ ಹೆಂಡತಿ, ಮಕ್ಕಳು ಸಹಿ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಾಗದ ಪತ್ರ ನೊಂದಾವಣಿ ಮಾಡಿಸಿಲ್ಲ. ಕಬ್ಜಾ ಬಗ್ಗೆ ದಾಖಲೆ ನೋಡಿಲ್ಲ. ಗುಂಟೆವಾರು ಖರೀದಿ ಮಾಡಲು ಬರುವುದಿಲ್ಲ ಎಂದು ಸರಕಾರಿ ಆದೇಶ ನಾನು ನೋಡಿಲ್ಲ. ಈರಪ್ಪ ಯಲ್ಲಪ್ಪ ಬಿಚ್ಚೂರ ರಾಗಲಿ, ಆತನ ಹೆಂಡತಿ ಮಕ್ಕಳಾಗಲಿ ಕಾಗದ ಪತ್ರಕ್ಕೆ ಸಹಿ ಮಾಡಿಲ್ಲ,

ಅದರಲ್ಲಿರುವ ಸಹಿಗಳು ಅವರವು ಅಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಯಾವ ದಿನ ನೊಂದಣಿ ಖರೀದಿ ಪತ್ರ ಬರೆದುಕೊಟ್ಟನು ಎಂದು ನನಗೆ ಗೊತ್ತಿಲ್ಲ. ಈರಪ್ಪ ಯಲ್ಲಪ್ಪ ಬಿಚ್ಚೂರ ರವರು ಜಕಲ್ಲಿ ಲಕ್ಷಣ, ಶೇಖಪ್ಪ ರಾಮಣ್ಣವರ, ಕಂಬಳಿ ಯವರಿಗೆ, ಹಟ್ಟಿ ಯವರಿಗೆ ಮತ್ತು ವೀರಭದ್ರಯ್ಯ ಕೊಟ್ರಯ್ಯ ಹೀರೆಮಠ ರವರಿಗೆ ಬರೆದುಕೊಟ್ಟಿರುತ್ತಾನೆ. 1 ನೇ ಪ್ರತಿವಾದಿ ಯಾರೊಂದಿಗೆ ವ್ಯವಹಾರ ಮಾಡಿದ್ದಾನೆ ಅವರಿಗೆ ನೊಂದಾಯಿತ ಪತ್ರ ಬರೆದುಕೊಟ್ಟಿದ್ದಾನೆ, ಯಾರೊಂದಿಗೆ ವ್ಯವಹಾರ ಮಾಡಿಲ್ಲ ಅವರಿಗೆ ಯಾವುದೇ ಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ವಾದಿಯ 36 ನೇ ಪ್ಲಾಟ ಇದೆ ಎನ್ನುವ ಕುರಿತು ನಕ್ಷೆ ನೋಡಿರುತ್ತೇನೆ. 36 ನೇ ಪ್ಲಾಟನ ಪೂರ್ವಕ್ಕೆ ಬಸಮ್ಮ ಅನಗೌಡರ ರವರ ಪ್ಲಾಟ, ಪಶ್ಚಿಮಕ್ಕೆ ಶಿವಪ್ಪ ಬಸಪ್ಪ ಗಡಾದ ರವರ ಪ್ಲಾಟ, ಉತ್ತರಕ್ಕೆ ಜಕ್ಕಲಿ ಮತ್ತು ಕಂಬಳಿ ರವರ ಪ್ಲಾಟ, ದಕ್ಷಿಣಕ್ಕೆ 15 ಅಡಿ ರಸ್ತೆ ಇರುತ್ತವೆ. ಸದರಿ ಚೆಕ್ಕಬಂದಿಯ ಮಧ್ಯದಲ್ಲಿ 36 ನೇ ಪ್ಲಾಟ ಇದೆ ಎಂದು ನಾನು ನಕ್ಷೆ ಮಾತ್ರ ನೋಡಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನನ್ನ ಹೆಂಡತಿಯ ಹೆಸರಿನಲ್ಲಿ ಪ್ಲಾಟ ಖರೀದಿಸಲಾಗಿದೆ ಎಂದು ಬರೆಸಿರುತ್ತೇನೆ. ನನ್ನ ಹೆಂಡತಿ ಖರೀದಿಸಿದಳು ಎಂದು ಹೇಳುವ ಪ್ಲಾಟನ ಸಂಚಗಾರ ಪತ್ರವನ್ನು ನಾನೇ ಬರೆದಿದ್ದೇನೆ ಎಂದರೆ ಸರಿಯಲ್ಲ. ಸಂಚಗಾರ ಪತ್ರ ಆಗಿ 1 ವರ್ಷದ ನಂತರ ಖರೀದಿ ಪತ್ರ ಬರೆದುಕೊಡಲು ಕೇಳಿರುತ್ತೇವೆ. ನನ್ನ ಹೆಂಡತಿ ಹೆಸರಿನಲ್ಲಿ ಖರೀದಿ ಪತ್ರ ಬರೆದುಕೊಡಲು ನಾವು ನೋಟಿಸ ನೀಡಿಲ್ಲ. ಈ ದಾವೆಯಲ್ಲಿಯೂ ಸಹ ವಾದಿಯು ಖರೀದಿ ಪತ್ರ ಬರೆದುಕೊಡಲು ನೋಟಿಸ ನೀಡಿಲ್ಲ.

3. 1 ನೇ ಪ್ರತಿವಾದಿ ಮತ್ತು ಈರಪ್ಪ ಹನಮಪ್ಪ ಬಿಚ್ಚೂರ ರವರ ಮನೆತನದ ಆಸ್ತಿಗಳ ಸಲುವಾಗಿ ಸಾಕಷ್ಟು ಪ್ರಕರಣಗಳು ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ಸರ್ವೆ ನಂ.394/5 ನೇದ್ದರ ಜಮೀನಿನಲ್ಲಿ ನಾನು, ವೀರಪ್ಪ ಹನಮಪ್ಪ ಬಿಚ್ಚೂರ ಮತ್ತು ಹನಮಂತ ಬೆಣಕಲ ಎನ್ನುವ ಸರ್ವೆಯರ ಸೇರಿ ರೇವಣಸಿದ್ದೇಶ್ವರ ಗ್ರಾಮಿಣಾಭಿವೃದ್ದಿ ಸೇವಾ ಸಮಿತಿ ಹೆಸರಿನಲ್ಲಿ ಈರಪ್ಪ ಯಲ್ಲಪ್ಪ ಬಿಚ್ಚೂರ ರವರು

ಹಕ್ಕುಬಿಟ್ಟು ಕೊಟ್ಟಿದ್ದಾನೆ ಎನ್ನುವ ಹಾಗೆ ಕಾಗದ ಪತ್ರ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಆ ವಿಚಾರ ಗೊತ್ತಾದ ನಂತರ ನನ್ನ ಮತ್ತು ಸರ್ವೆಯ ವಿರುದ್ಧ ಇದೆ ನ್ಯಾಯಾಲಯದಲ್ಲಿ ಖಾಸಗಿ ದೂರು ನಂ.20/2017 ರಂತೆ ಪ್ರಕರಣ ದಾಖಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆಯರನ್ನು ಉಳಿಸಲು ಈರಪ್ಪ ಯಲ್ಲಪ್ಪ ಬಿಚ್ಚೂರ ರವರ ಮೇಲೆ ಪ್ರಭಾವ ಬೀರಿ ಪ್ರಕರಣ ಹಿಂದಕ್ಕೆ ಪಡೆಯುವಂತೆ ವ್ಯವಸ್ಥೆ ಮಾಡಿದ್ದೇವೆ ಎಂದರೆ ನನಗೆ ಗೊತ್ತಿಲ್ಲ. ದಿಃ 06-04-2017 ರಂದು ನಾನು ಮತ್ತು ಇನ್ನಿತರ 25 ಜನರು ಪ್ರತಿವಾದಿಯರ ತಂಟೆ ಆಸ್ತಿಗಳಲ್ಲಿ ಅಕ್ರಮ ಪ್ರವೇಶ ಮಾಡಿ ಅವರ ಮೇಲೆ ಹಲ್ಲೆ ಮಾಡಿದೇವು ಎಂದರೆ ಸರಿಯಲ್ಲ. ಆದ್ದರಿಂದ ಅವರು ದೂರು ನೀಡಿದ್ದು ಪ್ರಕರಣ ನಂ.29/2022 ರಂತೆ ಪ್ರಕರಣ ದಾಖಲಾಗಿ ನಾವು ಹಾಜರಾಗಿದ್ದೇವೆ ಎಂದರೆ ಸರಿ. ಪ್ರತಿವಾದಿಯರೂ ನನಗಾಗಲಿ ವಾದಿಗಾಗಲಿ ಯಾವುದೇ ಸಂಚಗಾರ ಪತ್ರ ಬರೆದುಕೊಟ್ಟಿಲ್ಲ, ಅದರಲ್ಲಿರುವ ಸಹಿಗಳು ಪ್ರತಿವಾದಿಯರದ್ದು ಅಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಈರಪ್ಪ ಹನಮಪ್ಪ ಬಿಚ್ಚೂರ ಸೇರಿ ಪ್ರತಿವಾದಿಯರಿಗೆ ಅನ್ಯಾಯ ಮಾಡಲು ಖೊಟ್ಟಿ ಕಾಗದಗಳನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಸರ್ವೆ ನಂ.394/1 ಮತ್ತು 394/2 ಇಂದಿಗೂ ಶೇತ್ಕಿ ಜಮೀನುಗಳಾಗಿ ಇರುತ್ತವೆ ಎಂದರೆ ಸಾಕ್ಷಿಯು ಉತಾರೆಯಲ್ಲಿ ಇರುತ್ತವೆ ಎಂದು ನುಡಿಯುತ್ತಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರದ ಸಂಗತಿಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ.

Sd/-

(ಹುಲುಗಪ್ಪ ಡಿ)

ಪ್ರಧಾನ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ

ನ್ಯಾಯಾಧೀಶರು ರೋಣ.